ಅಧ್ಯಕ್ಷರು : ಮಾನ್ಯ ಸಂಸದೀಯ ವ್ಯವಹಾರ ಸಚಿವರೆ, ಮುಂದಿನ ನಮ್ಮ ಜಿಎಸಿ ಸಭೆಯಲ್ಲಿ ಈ ವಿಷಯವನ್ನು ಇಟ್ಟು ಯಾವ ರೀತಿ ಮಾಡಬೇಕೆನ್ನುವುದನ್ನು ತೀರ್ಮಾನ ಮಾಡೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಆಗಬಹುದು ಅಧ್ಯಕ್ಷರೆ.

ಶ್ರೀ ಬಿ.ಆರ್. ಯಾವಗಲ್ : ಅಧ್ಯಕ್ಷರೆ, ನನಗೆ ಗೊತ್ತಿರುವಂತೆ ಒಂದು ಸಣ್ಣ ಸಲಹೆ, ಈ ಶೂನ್ಯವೇಳೆ 351 ಬಹುತೇಕ ಮೊದಲಿನ ಸಂಪ್ರದಾಯದಂತೆ ಕೊಡಿಪೈಯಾಗಿ ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳು ಸಚಿವರು ಅಧ್ಯಕ್ಷರಾಗಿದ್ದಾಗಲೆ ಬಂದಿದ್ದು. ಈ ವ್ಯವಸ್ಥೆ ಬಂದದ್ದೇ ಆಗ. ನಾವೆಲ್ಲಾ ನಿಯಮ 351ರ ಅಡಿಯಲ್ಲಿ ಪ್ರಸ್ತಾಪವಾದ ವಿಷಯಗಳಿಗೆ ಮಂತ್ರಿಗಳಾಗಿ ಹೇಳಿಕೆಯನ್ನು ಕೊಡುತ್ತಿದ್ದೆವು. ನಂತರ ಕಳೆದ ಹಾಗೂ ಅದಕ್ಕಿಂತ ಹಿಂದೆ ವಿಧಾನಸಭೆಯಲ್ಲಿ ನಿಯಮ 351 ಉಳಿಯಿತು ಹಾಗೂ ಶೂನ್ಯವೇಳೆಯು ಆರಂಭವಾಯಿತು. ಶೂನ್ಯವೇಳೆಯಲ್ಲಿಯೇ ಒಂದು ವಿಷಯವನ್ನು ಒಂದು ದಿವಸವೆಲ್ಲ ತೆಗೆದುಕೊಂಡು ಚರ್ಚೆ ಮಾಡಿದಂತಹ ಉದಾಹರಣೆ ಇದೆ. ಇದರ ಉದ್ದೇಶ ಸರ್ಕಾರದಿಂದ ತುರ್ತಾಗಿ ಮಾಹಿತಿಯನ್ನು ಪಡೆದುಕೊಳ್ಳುವ ಅನುಕೂಲ ಇದರಲ್ಲಿದೆ ಎನ್ನುವುದು, ಸರ್ಕಾರ ಇದಕ್ಕೆ ಉತ್ತರ ಕೊಟ್ಟರೆ ಯಾವ್ದೆ ಪ್ರಮಾದವೇನೂ ಆಗುವುದಿಲ್ಲ.

ಅಧ್ಯಕ್ಷರು : ಈ ಬಗ್ಗೆ ಮುಂದಿನ ಜಿಎಸಿ ಸಭೆಯಲ್ಲಿ ತೀರ್ಮಾನವನ್ನು ತೆಗೆದುಕೊಳ್ಳೋಣ. ಮಾನ್ಯ ಚಂದ್ರೇಗೌಡರವರು ಇವತ್ತು ಪ್ರಸ್ತಾಪ ಮಾಡುತ್ತಾರಂತೆ, ಮಂತ್ರಿಗಳ್ಯಾರಾದರು ಇದ್ದರೆ ಇವತ್ತೆ ಉತ್ತರ ಕೊಡಲಿ ಇಲ್ಲದಿದ್ದರೆ ಇನ್ನೊಂದು ದಿವಸ ಕೊಡಲಿ.

Sri D.B.Chandra Gowda : I have not come in the way of mentioning it. It should be free. ಪ್ರಸ್ತಾಪ ಮಾಡುವುದಕ್ಕೆ ನಾನು ವಿರೋಧ ಮಾಡಲೇ ಇಲ್ಲ, ಉತ್ತರವನ್ನು ಸರ್ಕಾರದಿಂದ ಕ್ಷಣ ನಿರೀಕ್ಷೆ ಮಾಡುವುದು ಸರಿಯಲ್ಲ.

ಅಧ್ಯಕ್ಷರು : ಪ್ರಸ್ತಾಪವನ್ನು ಸಂಕ್ಷಿಪ್ತವಾಗಿ ಮಾಡಬೇಕು. ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಾನು ಅವಕಾಶ ಕೊಡುತ್ತಿದ್ದೇನೆ ಪ್ರಸ್ತಾಪ ಮಾಡಿ, ಮೊದಲು ಅನುಕ್ರಮವಾಗಿ ಶ್ರೀ ಆತ್ಮನಂದಾ, ಶ್ರೀ ಪಿ.ರಮೇಶ್ ಹಾಗೂ ಶ್ರೀ ಎಂ.ಭಕ್ತವತ್ಸಲಂ, ಶ್ರೀ ಸಿ.ಬೈರೇಗೌಡ, ಶ್ರೀ ಕೆ.ಶ್ರೀನಿವಾಸಗೌಡರು ಇವರು ಉಪಸ್ಥಿತರಿಲ್ಲ, ಶ್ರೀ ಯಾವಗಲ್‌ರವರೆ ನೀವು ಪ್ರಸ್ತಾಪ ಮಾಡಿ.

4.00 ಪಿ.ಎಂ.

(ಆ) ನರಗುಂದ ತಾಲ್ಲೂಕಿನ ಕಣಕಿ ಕುಪ್ಪ ಗ್ರಾಮದ ಶಿವಪ್ಪ ಕೊಳ್ಳಿ ಎಂಬುವರ ಮಗಳು ಕಾಣೆಯಾಗಿರುವುದು.

ಶ್ರೀ ಬಿ.ಆರ್. ಯಾವಗಲ್ (ನರಗುಂದ) : ಮಾನ್ಯ ಅಧ್ಯಕ್ಷರೇ, ದಿನಾಂಕ 12-3-2000ರಂದು ನರಗುಂದ ತಾಲ್ಲೂಕಿನ ಕಣಕಿ ಕುಪ್ಪ ಗ್ರಾಮದ ಸುಮಾರು 15-16 ವರ್ಷ ವಯಸ್ಸಿನ ಬಾಲಕಿಯಾದ ದಾಕ್ಷಾಯಣಿ ಶಿವಪ್ಪ ಕೊಳ್ಳಿ ಎನ್ನುವ ಹೆಣ್ಣು ಮಗಳು ಕೆಲಸಕ್ಕೆ ಹೋಗಿದ್ದು ಸಂಜೆ ಸುಮಾರಿಗೆ ಅಲ್ಲಿಂದ ಕಾಣೆಯಾಗಿದ್ದಾಳೆ. ಇಲ್ಲಿಯವರೆಗೆ ಅವಳು ಎಲ್ಲಿದ್ದಾಳೆ. ಏನಾಗಿದ್ದಾಳೆ ಎನ್ನುವ ಪತ್ತೆ ಇಲ್ಲ. ಇದರ ಬಗ್ಗೆ ಪೋಲೀಸ್ ಇಲಾಖೆ ಪ್ರಯತ್ನ ಮಾಡಿದೆ ಎಂದು ನಾನು ಹೇಳುತ್ತೇನೆ. ಆದರೆ ಇಲ್ಲಿಯವರಿಗೆ ಅವಳು

ಯಾವುದೇ ರೀತಿಯಲ್ಲಿ ಪತ್ತೆಯದಂಥ ಪರಿಸ್ಥಿತಿ ಇಲ್ಲ. ಆ ಪ್ರದೇಶದಲ್ಲಿ ಒಂದು ರೀತಿಯ ಟೆನ್ಷನ್ ಡೆವಲಪ್ ಆಗಿದೆ. ಅವಳ ತಂದೆತಾಯಿಗಳಿಗೆ ಬಹಳ ತೊಂದರೆಯಾಗಿದೆ. ಅದು ಹೀಗೂ ಆಗಿರಬಹುದು. ಅಲ್ಲಿಂದ ಅವಳನ್ನು ಬೊಂಬಾಯಿ ಅಥವಾ ಮತ್ತೊಂದು ಕಡೆಗೆ ಸಾಗಿಸಿರಬಹುದು. ಕೆಲಸ ಮಾಡುತ್ತಿದ್ದ ತನ್ನ ತಾಯಿಯಿಂದ ಸ್ವಲ್ಪ ಅಂತರದಲ್ಲಿದ್ದಂಥ ಆ ಹೆಣ್ಣು ಮಗಳನ್ನು ಯಾವ ರೀತಿ ಎತ್ತಿಕೊಂಡು ಹೋಗಿದ್ದಾರೋ ಗೊತ್ತಿಲ್ಲ. ಅದಷ್ಟು ಬೇಗ ಶೋಧನೆ ಮಾಡಿ ಅವಳ ತಂದೆತಾಯಿಗಳಿಗೆ ಒಪ್ಪಿಸುವಂಥ ಕೆಲಸ ಮಾಡಬೇಕು. ದೂರದವರೆಗೆ ಒಯ್ದಿರುವ ಅವಕಾಶಗಳೂ ಇರಬಹುದೆಂದು ಹೇಳುತ್ತೇನೆ. ಅವಳನ್ನು ಆದಷ್ಟು ಬೇಗ ಪತ್ತೆ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೇ, ಅವರು ಹೇಳಿರುವುದನ್ನು ಈಗಾಗಲೇ ತಮ್ಮ ಗಮನಕ್ಕೂ ತಂದಿದ್ದಾರೆ. ತಮ್ಮ ಮುಖಾಂತರ ನನಗೆ ಪತ್ರ ಸಿಕ್ಕಿದೆ. ಅದರ ಮೇಲೆ ಈಗಾಗಲೇ ಕಾರ್ಯಕ್ರಮ ಜರುಗಿಸಿದ್ದೇವೆ ಅವಳು ಎಲ್ಲಿದ್ದಾಳೆ ಎನ್ನುವ ಬಗ್ಗೆ ಹುಡುಕಾಟ ನಡೆದಿದೆ. ನಮಗೆ ಮಾಹಿತಿ ಬಂದ ತಕ್ಷಣ ಅವರಿಗೆ ಉತ್ತರವನ್ನು ಕಳುಹಿಸಿಕೊಡುತ್ತೇವೆ.

(ಇ) ಮಂಗಳೂರಿನಲ್ಲಿರುವ ಸರ್ಕಾರಿ ಜಿಲ್ಲಾ ಆಸ್ಪತ್ರೆಯಾದ ಲೇಡಿ ಗೋಷನ್ ಆಸ್ಪತ್ರೆಗೆ ವಿದ್ಯುತ್ ಸರಬರಾಜು ಕುರಿತು

+ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಸನ್ಮಾನ್ಯ ಅಧ್ಯಕ್ಷರೇ, ಮಂಗಳೂರಿನಲ್ಲಿರುವಂಥ ಸರ್ಕಾರೀ ಜಿಲ್ಲಾ ಆಸ್ಪತ್ರೆಯಾದ ಲೇಡಿ ಗೋಷನ್ ಆಸ್ಪತ್ರೆಗೆ ಸಂಬಂಧಪಟ್ಟಂತೆ 70 ಲಕ್ಷ ರೂಪಾಯಿಗಳ ಬಿಲ್ಲನ್ನು ಕಟ್ಟಬೇಕು. ಇಲ್ಲದಿದ್ದರೆ ವಿದ್ಯುತ್ ಸರಬರಾಜನ್ನು ಡಿಸ್‌ಕನೆಕ್ಷನ್ ಮಾಡಲಾಗುವುದು ಎಂದು ಕೆ.ಪಿ.ಟಿ.ಸಿ.ಎಲ್. ಕಡೆಯಿಂದ ಆರ್ಡರ್ ಹೋಗಿದೆ. ಇದರಿಂದ ಒಂದು ಸೇವಾಸಂಸ್ಥೆಗೆ ದೊಡ್ಡ ಅನ್ಯಾಯವಾಗುತ್ತದೆ. ಹಾಗೂ ಸಾವಿರಾರು ರೋಗಿಗಳಿಗೆ, ಅದರಲ್ಲೂ ವಿಶೇಷವಾಗಿ ಜನಸಾಮಾನ್ಯರಿಗೆ ತುಂಬಾ ತೊಂದರೆಯಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ತಕ್ಷಣ ಮಧ್ಯೆ ಪ್ರವೇಶ ಮಾಡಬೇಕು. ಕಳೆದ ಹಲವು ವರ್ಷಗಳಲ್ಲಿ ಅಲ್ಲಿಗೆ ಹೊಸ ಹೊಸ ಫ್ಯಾಕಲ್ಟೀಸ್ ಬಂದ ಕಾರಣ ಲೋಡ್ ಜಾಸ್ತಿಯಾಗಿ ಕನ್‌ಸಂಪ್ಷನ್ ಹೆಚ್ಚು ಮಾಡುತ್ತಾ ಹೋಯಿತು. ಇಲ್ಲಿ ಏನಾಗಿದೆ ಎಂದರೆ ಸಂಬಂಧಪಟ್ಟ ಇಂಜೀನಿಯರ್ ರಿನ್ಯೂಯಲ್ ಮಾಡಲು ಕಾರ್ಯಕ್ರಮವನ್ನು ತೆಗೆದುಕೊಳ್ಳದೇ ಇರುವುದರಿಂದ ಉಂಟಾಗಿರುವಂಥ ಸಮಸ್ಯೆ ಇದು. ಆ ಆಸ್ಪತ್ರೆಯ ಅಧಿಕಾರಿಗಳು ಅಥವಾ ಡಾಕ್ಟರ್‌ಗಳು ಏನೂ ಮಾಡಿಲ್ಲ. ಆ 70 ಲಕ್ಷದಲ್ಲಿ ಪೆನಾಲ್ಟಿಯೇ ಸುಮಾರು 30 ಲಕ್ಷಕ್ಕಿಂತಲೂ ಜಾಸ್ತಿ ಇದೆ. ಆದ್ದರಿಂದ ದಂಡ ಮತ್ತು ಬಡ್ಡಿಯನ್ನು ಮನ್ನಾ ಮಾಡಿ 17 ಲಕ್ಷ ರೂಪಾಯಿಗಳನ್ನು ಮಾತ್ರ ಕಟ್ಟುವಂತಾಗಬೇಕು. ಏಕೆಂದರೆ ಅವರು 17 ಲಕ್ಷ ರೂಪಾಯಿಗಳ ಮೌಲ್ಯದಷ್ಟು ಇರುವ ಎಲೆಕ್ಟ್ರಿಸಿಟಿಯನ್ನು ಕನ್‌ಸ್ಯೂಮ್ ಮಾಡಿದ್ದಾರೆ. ಈಗಾಗಲೇ ಆ ಆಸ್ಪತ್ರೆಯಿಂದ 24 ಲಕ್ಷ ರೂಪಾಯಿಗಳ ಪೇಮೆಂಟ್ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಬಾಕಿ ಇರುವಂಥ ಹಣದಲ್ಲಿ ದಂಡ ಮತ್ತು ಬಡ್ಡಿಯನ್ನು ಮನ್ನಾ ಮಾಡಬೇಕು ಹಾಗೂ ಸರ್ಕಾರ ಈ ಬಗ್ಗೆ ತಕ್ಷಣ ನಿರ್ಣಯ ತೆಗೆದುಕೊಂಡು ಕೆ.ಪಿ.ಟಿ.ಸಿ.ಎಲ್.ಗೆ ಆದೇಶವನ್ನು ಕೊಡಬೇಕು ಎನ್ನುವ ವಿನಂತಿಯನ್ನು ತಮ್ಮ ಮೂಲಕ ಮಾಡಲು ಇಚ್ಛಿಸುತ್ತಿದ್ದೇನೆ.